# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೮, ಆಗಸ್ಟ್, ೨೦೨೬ (ಶ್ರಾವಣ, ೨೭, ಶಕವರ್ಷ, ೧೯೪೮)<br>BENGALURU, TUESDAY, 18, AUGUST, 2026 ( SHRAVANA , 27, SHAKAVARSHA, 1948) | ನಂ. ೭೩೭<br>No. 737 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

## ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–15)**

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದ ಮೂಲಕ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಹೊಸ ಪ್ರಕರಣ 18ಸಿ ಸೇರ್ಪಡೆ.-** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 18ಬಿ ಪ್ರಕರಣದ ತರುವಾಯ ಈ ಮುಂದಿನ ಹೊಸ ಪ್ರಕರಣವನ್ನು 2019ರ ನವೆಂಬರ್ 22ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸತಕ್ಕದ್ದು, ಎಂದರೆ:-

"**18-ಸಿ. ಬಡಾವಣೆಗಳ ಅಭಿವೃದ್ಧಿ ಪೂರ್ಣಗೊಳ್ಳದಿರುವ ಬಡಾವಣೆಗಳಿಗೆ ದಂಡವನ್ನು ವಿಧಿಸುವುದು.-** (1) 2005ರ ನಂತರದಲ್ಲಿ ಮತ್ತು ಕರ್ನಾಟಕ ಪಟ್ಟಣ ಮತ್ತು

ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 38)ರ ಪ್ರಾರಂಭದ ದಿನಾಂಕಕ್ಕೆ ಮೊದಲು ಅನುಮೋದನೆಗೊಂಡ ಬಡಾವಣೆಗಳ ಸಂದರ್ಭದಲ್ಲಿ, ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಳ್ಳದಿರುವ ಕಡೆಗಳಲ್ಲಿ, ಯೋಜನಾ ಪ್ರಾಧಿಕಾರವು ಬಡಾವಣೆಯಲ್ಲಿನ ನಿವೇಶನಗಳ ಮಾರ್ಗಸೂಚಿ ಮೌಲ್ಯದ ಶೇಕಡಾ ಮೂರರಷ್ಟು (3%) ದಂಡವನ್ನು ವಿಧಿಸಿದ ತರುವಾಯ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಕ್ಕಾಗಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2026ರ ಪ್ರಾರಂಭದ ದಿನಾಂಕದಿಂದ ಪ್ರತಿ ವಾರ್ಷಿಕ ಅವಧಿಗಾಗಿ ಯೋಜನಾ ಪ್ರಾಧಿಕಾರವು ಬಿಡುಗಡೆಗೊಳಿಸಬೇಕಾದ ಅಂತಿಮ ಬಡಾವಣೆ ಅನುಮೋದನೆಯನ್ನು ಮಂಜೂರು ಮಾಡತಕ್ಕದ್ದು ಮತ್ತು ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸತಕ್ಕದ್ದು.

(2) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 38) ಪ್ರಾರಂಭದ ದಿನಾಂಕಕ್ಕೆ ಮೊದಲು ಯೋಜನಾ ಪ್ರಾಧಿಕಾರಗಳು ಅನುಮೋದಿಸಿದ ಬಡಾವಣೆಗಳಲ್ಲಿನ ನಿವೇಶನಗಳ ಬಿಡುಗಡೆಗಾಗಿ ಯಾರೇ ವ್ಯಕ್ತಿಯಿಂದ, ಯಾವುದೇ ದಂಡದ ವಿಧಿಸುವಿಕೆ, ಮೌಲ್ಯನಿರ್ಣಯ ಮತ್ತು ಸಂಗ್ರಹಣೆಗಾಗಿ ಹೊರಡಿಸಲಾದ ನೋಟೀಸುಗಳು ಅಥವಾ ಆದೇಶಗಳು ಮತ್ತು ಎಲ್ಲಾ ವ್ಯವಹರಣೆಗಳನ್ನು ಒಳಗೊಂಡಂತೆ, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ವ್ಯತಿರಿಕ್ತವಾಗಿ ಏನೇ ಒಳಗೊಂಡಿದ್ದರೂ, ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ ಅಥವಾ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ತಾತ್ಪರ್ಯವಾಗುವ ಏನನ್ನಾದರೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2026ರ ಮೂಲಕ ತಿದ್ದುಪಡಿಯಾದಂತೆ, ಮೂಲ ಅಧಿನಿಯಮದಡಿ ಅಂಥ ದಂಡವನ್ನು ವಿಧಿಸಲು, ಮೌಲ್ಯನಿರ್ಣಯಿಸಲು ಮತ್ತು ಸಂಗ್ರಹಣೆ ಮಾಡಲು ಕ್ರಮ ಕೈಗೊಂಡಿದ್ದರೆ ಅಥವಾ ತೆಗೆದುಕೊಂಡಿದ್ದರೆ ಹೇಗೋ ಹಾಗೆ ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಹಾಗೂ ಅದರನ್ವಯವಾಗಿ,-

(ಎ) ಎಲ್ಲಾ ಉದ್ದೇಶಗಳಿಗಾಗಿ ಅಂಥ ದಂಡದ ವಿಧಿಸುವಿಕೆ, ಮೌಲ್ಯನಿರ್ಣಯ ಅಥವಾ ಸಂಗ್ರಹಣೆಗೆ ಸಂಬಂಧಿಸಿದಂತೆ ಯೋಜನಾ ಪ್ರಾಧಿಕಾರ ಅಥವಾ ಅದರ ಯಾರೇ ಅಧಿಕಾರಿಯು ಮಾಡಿದ ಅಥವಾ ಕೈಗೊಂಡ ಎಲ್ಲಾ ಕಾರ್ಯಗಳು, ವ್ಯವಹರಣೆಗಳು ಅಥವಾ ವಿಷಯಗಳನ್ನು ಕಾನೂನಿನ ಪ್ರಕಾರ ಮಾಡಲಾಗಿದೆಯೆಂದು ಮತ್ತು ಯಾವಾಗಲೂ ಹಾಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು;

(ಬಿ) ಅಂಥ ಯಾವುದೇ ದಂಡದ ಮರುಪಾವತಿಗಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ ಅಥವಾ ಮುಂದುವರೆಸತಕ್ಕದ್ದಲ್ಲ; ಮತ್ತು

(ಸಿ) ಯಾವುದೇ ನ್ಯಾಯಾಲಯವು ಅಂಥ ಯಾವುದೇ ದಂಡದ ಮರುಪಾವತಿ ನಿರ್ದೇಶನದ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ”.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2005ರ ನಂತರದಲ್ಲಿ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ 38)ರ ಪ್ರಾರಂಭದ ದಿನಾಂಕಕ್ಕೆ ಮೊದಲು ಅನುಮೋದನೆಗೊಂಡ ಬಡಾವಣೆಗಳ ಸಂದರ್ಭದಲ್ಲಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದಕ್ಕಾಗಿ ದಂಡ ವಿಧಿಸುವ ಉಪಬಂಧವನ್ನು ಕಲ್ಪಿಸಲು ಅನುವಾಗುವಂತೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ. ಅನುಮೋದಿತ ಬಡಾವಣೆಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸದಿರುವುದಕ್ಕಾಗಿ ಯೋಜನಾ ಪ್ರಾಧಿಕಾರಗಳು ಸುತ್ತೋಲೆ ಸಂಖ್ಯೆ: ಯುಡಿಡಿ:60:ಮೈಅಪ್ರಾ:2018, ದಿನಾಂಕ:22.11.2018ರಲ್ಲಿನ ಸರ್ಕಾರಿ ನಿರ್ದೇಶನಗಳ ಮೂಲಕ ದಂಡವನ್ನು ವಿಧಿಸಿರುತ್ತವೆ ಮತ್ತು ಅದನ್ನು ಶಾಸನಾತ್ಮಕ ಉಪಬಂಧಗಳೊಳಗೆ ತರುವುದು ಹಾಗೂ ಈಗಾಗಲೇ ವಿಧಿಸಲಾದ ಅಥವಾ ಸಂಗ್ರಹಿಸಲಾದ ದಂಡವನ್ನು ಸಿಂಧುಗೊಳಿಸುವುದೂ ಸಹ ಅಗತ್ಯವಾಗಿರುತ್ತದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಈ ಹಂತದಲ್ಲಿ ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಡಾ. ಯತೀಂದ್ರ ಸಿದ್ದರಾಮಯ್ಯ**
ನಗರಾಭಿವೃದ್ಧಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**TENTH SESSION**

# THE KARNATAKA TOWN AND COUNTRY PLANNING (AMENDMENT) BILL, 2026

**(LA Bill No. 15 of 2026)**

A Bill further to amend the Karnataka Town and Country Planning Act, 1961.

Whereas it is expedient further to amend the Karnataka Town and Country Planning Act, 1961 (Karnataka Act 11 of 1963) for the purposes hereinafter appearing:

Be it enacted by the Karnataka State Legislature in the seventy seventh year of the Republic of India, as follows:

**1. Short title and commencement.-**(1) This Act may be called the Karnataka Town and Country Planning (Amendment) Act, 2026.

(2) It shall come into force at once.

**2. Insertion of new section 18-C.-** In the Karnataka Town and Country Planning Act, 1961 (Karnataka Act 11 of 1963), after section 18-B, the following new section shall be inserted, with effect from $22^{nd}$ day of November, 2019, namely:-

"**18-C. Levy of penalty for layouts where the development of layouts is not completed.-** (1) In case of layouts approved from 2005 onwards and prior to the date of commencement of the Karnataka Town and Country Planning (Amendment) Act, 2015 (Karnataka Act 38 of 2015), wherever the development works have not been completed, the Planning authority shall grant final layout approval and release the remaining sites after levying a penalty of three percent (3%) of the guidance value of the plots in the layout which are to be released by the Planning authority for each annual period from the date of commencement of the Karnataka Town and Country Planning (Amendment) Act, 2026, for completion of development works.

(2) Notwithstanding anything contained in any judgement, decree or order of any court, tribunal or other authority to the contrary, anything done or any action taken or purporting to have been done or taken including any notices or orders issued and all proceedings held for the levy, assessment and collection of any penalty from any person for release of sites in the layouts approved by the planning authorities prior to the date commencement of the Karnataka Town and Country Planning (Amendment) Act, 2015 (Karnataka Act 38 of 2015) shall deemed to be valid and effective as if such levy, assessment and collection of penalty has been made, taken or done under the Principal Act, as amended by the Karnataka Town and Country Planning (Amendment) Act, 2026 and accordingly,-

(a) all acts, proceedings or things done or taken by the planning authority or any of its officer in connection with the levy assessment or collection of such penalty for all purposes be deemed to be and to have always been done or taken in accordance with law;

(b) no suit or other proceedings shall be maintained or continued in any court or tribunal or before any authority for the refund of any such penalty; and

(c) no court shall enforce any decree or order to direct the refund of any such penalty.”

**STATEMENT OF OBJECTS AND REASONS**

It is considered necessary further to amend the Karnataka Town and Country Planning Act, 1961 (Karnataka Act 11 of 1963) to enable the provision to levy penalty for non-completion of development of layouts approved from 2005 onwards and prior to the date of commencement of the Karnataka Town and Country Planning (Amendment) Act, 2015. Penalty is being levied by the Planning Authorities in accordance with the Government directions vide Notification No.UDD:60: MYAAPRA 2018, dated:22.11.2018 for not completing the development works in the approved layouts and it is found necessary to bring it under the statutory provisions and also validate the penalty already levied or collected.

Hence, the Bill.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## FINANCIAL MEMORANDUM

There is no extra expenditure involved in the proposed legislative measure at this stage.

**Dr. YATHINDRA SIDDARAMAIAH**
Minister for Urban Development

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU